SERVICE ABOVE SELF



2025-26

Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD

Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –30 ದಿನಾಂಕ : 04–03–2026

**ದಿನಾಂಕ: 04.02.2026 ರ ವಾರದ ಸಭೆ. ನಮ್ಮ ಕ್ಲಬ್‌ನ ಮಾಜಿ ಖಜಾಂಚಿಗಳು, ಹಿರಿಯ ಸದಸ್ಯರೂ, ಖ್ಯಾತ ಲೆಕ್ಕ ಪರಿಶೋಧಕರೂ ಆಗಿರುವ ರೊ.ಹೆಚ್.ಎಸ್. ರಘುರಾಮ ಭಟ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಇತ್ತೀಚೆಗೆ ಕೇಂದ್ರ ಸರ್ಕಾರದವರು ಮಂಡಿಸಿದ ವಾರ್ಷಿಕ ಬಜೆಟ್‌ನ ಕೆಲವೊಂದು ವಿಚಾರಗಳನ್ನು ಅಂಕಿ ಅಂಶಗಳ ಸಹಿತ ಪ್ರಸ್ತಾಪಿಸಿ ಮಾತನಾಡಿದರು.**

**ಇದೇ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ತಮ್ಮ ವೃತ್ತಿಯಲ್ಲಿ ದೀರ್ಘಕಾಲದಿಂದ ಸೇವೆ ಸಲ್ಲಿಸಿ, ಪ್ರಾವೀಣ್ಯತೆ ಪಡೆದು, ಸಮಾಜಕ್ಕೆ ಸೇವೆ ನೀಡುತ್ತಿರುವ ವೃತ್ತಿ ಪರಿಣಿತರುಗಳನ್ನು ವೇದಿಕೆಗೆ ಆಹ್ವಾನಿಸಿ ಸನ್ಮಾನಿಸಲಾಯಿತು. ಸಾರ್ಜೆಂಟ್ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿದ ನಂತರ ಕಲಾಪಗಳು ಆರಂಭವಾದವು. ವೇದಿಕೆಯಲ್ಲಿ ಅಧ್ಯಕ್ಷರಾದ ರೊ.ಆರ್.ಆನಂದ್, ಮುಖ್ಯ ಅತಿಥಿಗಳಾದ ರೊ.ಹೆಚ್.ಎಸ್. ರಘುರಾಮ ಭಟ್ ಮತ್ತು ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿಯವರು ಉಪಸ್ಥಿತರಿದ್ದರು.**

ರೊ. ಸುಮಲತಾ ಭೂಪಾಳಂರವರಿಂದ, 'ನಾನು ಇರಲಿ, ಇಲ್ಲದಿರಲಿ, ನನ್ನ ಭಾರತ ಬೆಳಗುತಿರಲಿ' ಎಂಬ ದೇಶಭಕ್ತಿಗೀತೆಯ ಸುಶ್ರಾವ್ಯಗಾಯನದೊಂದಿಗೆ ಪ್ರಾರ್ಥನೆಯಾಯಿತು. ರೊ.ಸೆಂಥಿಲ್ ವೇಲನ್‌ರವರು ಎಲ್ಲರನ್ನು ಸ್ವಾಗತಿಸಿದರು. ರೊ. ಎಂ. ಮಾಧವಾಚಾರ್ ರವರನ್ನು ವೇದಿಕೆಗೆ ಆಹ್ವಾನಿಸಿ ಹುಟ್ಟು ಹಬ್ಬದ ಶುಭಾಶಯ ಕೋರಿ ನೆನಪಿನ ಕಾಣಿಕೆ ನೀಡಲಾಯಿತು. ರೊ. ಲಕ್ಷ್ಮೀನಾರಾಯಣ ಭಟ್‌ರವರು ಮುಖ್ಯ ಅತಿಥಿಗಳಾದ ರೊ. ಹೆಚ್.ಎಸ್. ರಘುರಾಮ ಭಟ್ಟರನ್ನು ಪರಿಚಯಿಸಿದರು. ಶ್ರೀಯುತರು ಕಳೆದ 26 ವರ್ಷಗಳಿಂದ ಶಿವಮೊಗ್ಗೆಯಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿ ತಮ್ಮ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಇವರು ಅಡಿಕೆ ಬೆಳೆಗಾರರೂ ಆಗಿದ್ದಾರೆ. ಚಾರ್ಟರ್ಡ್ ಅಕೌಂಟೆಂಟ್ ಅಸೋಸಿಯೇಶನ್‌ನಲ್ಲಿ, ಜೆಸಿ ಇಂಟರ್ ನ್ಯಾಶನಲ್ ಸಂಸ್ಥೆಗಳಲ್ಲಿ ಖಜಾಂಚಿಗಳಾಗಿ ಹಾಲಿ ರೋಟರಿ ವಾರ್ಷಿಕ ದತ್ತಿನಿಧಿಯ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಇಬ್ಬರು ಮಕ್ಕಳೂ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದಾರೆ ಎನ್ನುವುದು ವಿಶೇಷ ಸಂಗತಿಯಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಈ ಕೆಳಕಂಡವರನ್ನು ರೋಟರಿಯ ವಾಡಿಕೆಯಂತೆ ವೃತ್ತಿ ಸೇವಾ ಮಾಸಾಚರಣೆ ಅಂಗವಾಗಿ ಶಿವಮೊಗ್ಗೆಯ ವೃತ್ತಿ ಪರಿಣಿತರನ್ನು ಸನ್ಮಾನಿಸಲಾಯಿತು. ಪಿಎಜಿ. ರೊ.ಸುನೀತಾ ಶ್ರೀಧರ್‌ರವರು ನಿರೂಪಿಸಿ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಪ್ರತಿಯೊಬ್ಬರ ಹೆಸರಿನೊಂದಿಗೆ ಸನ್ಮಾನಿಸಲ್ಪಡುವವರ ವೃತ್ತಿ ಬಗ್ಗೆ ತಿಳಿಸಿ ವೇದಿಕೆಗೆ ಆಹ್ವಾನಿಸಿದರು.







1. **ಶ್ರೀ ಲಕ್ಷ್ಮೀನಾರಾಯಣ ಮತ್ತು ಶೈಲಾ** – ಎಸ್.ಬಿ. ವೆಬ್ ವಿಜನ್ ಇವರನ್ನು ರೊ.ಪಿಡಿಜಿ. ಡಾ.ಪಿ.ನಾರಾಯಣರವರು ಸಭೆಗೆ ಪರಿಚಯಿಸಿದರು.
2. **ಶ್ರೀ ರಾಜೇಂದ್ರ ಮತ್ತು ಶ್ರೀಮತಿ ಮಲ್ಲಿಕಾ** –(ಕಟ್ಟಡ ನಿರ್ಮಾಣ) ಇವರನ್ನು ರೊ. ಎ. ಮಂಜುನಾಥರವರು ಪರಿಚಯಿಸಿದರು.
3. **ಶ್ರೀ ರವಿರಾಜ್ (ರವಿಚಂದ್ರ)**– (ಶೈಕ್ಷಣಿಕ ಹಸೆ ಚಿತ್ತಾರ ಶೈಕ್ಷಣಿಕ ಶಿಕ್ಷಣದಲ್ಲಿ ಸಾಧನೆ) ಪಿಎಜಿ. ರೊ.ಸುನೀತಾ ಶ್ರೀಧರ್‌ರವರು ಪರಿಚಯಿಸಿದರು.
4. **ಶ್ರೀ ಶಿವಣ್ಣ** – (ಲಾಂಡ್ರಿ) – ಪಿಎಜಿ. ರೊ. ಸುನೀತಾ ಶ್ರೀಧರ್‌ರವರು ಪರಿಚಯಿಸಿದರು.

## ಈ ವಾರದ ಸಭೆ

**ದಿನಾಂಕ: 11–2–2026, ಬುಧವಾರ** **ಸಂಜೆ 6:45 ಗಂಟೆಗೆ**

**ಅತಿಥಿ: ಪ್ರೊ. ಬಿ.ಎಂ. ಕುಮಾರಸ್ವಾಮಿ**

**ಖ್ಯಾತ ಪರಿಸರವಾದಿಗಳು, ಶಿವಮೊಗ್ಗ**

**ವಿಷಯ: ನದಿಗಳ ಜೋಡಣೆ ವೈಜ್ಞಾನಿಕವೇ...?**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

**ಸ್ಥಳ: ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ













5. **ಶ್ರೀ ಗೋಪಿ** – (ಆಟೋಚಾಲಕರು) ಪಿಎಜಿ. ರೊ. ಸುನೀತಾ ಶ್ರೀಧರ್‌ರವರು ಪರಿಚಯಿಸಿದರು.

ಇವರುಗಳನ್ನು ರೊ.ಪಿಡಿಜಿ. ಡಾ.ಪಿ.ನಾರಾಯಣ, ರೊ.ಪಿಎಜಿ. ಎನ್.ಎಸ್. ಶ್ರೀಧರ್, ರೊ. ಪಿಎಜಿ ರೊ.ಸುನಿತಾ ಶ್ರೀಧರ್, ಅಧ್ಯಕ್ಷರಾದ ರೊ.ಆರ್.ಆನಂದ್, ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ, ರೊ. ಹೆಚ್.ಎಸ್. ರಘುರಾಮ್ ಭಟ್ ಮುಂತಾದವರು ಸೇರಿ ಸನ್ಮಾನಿಸಿದರು.

ನಂತರ ರೊ. ಹೆಚ್.ಎಸ್. ರಘುರಾಮ ಭಟ್ಟರು ಈ ಕೆಳಕಂಡಂತೆ ದಿನಾಂಕ : 01.02.2026 ರಂದು ಮಂಡಿಸಲಾದ ಕೇಂದ್ರ ಸರ್ಕಾರದ 2026 ರ ಬಜೆಟ್‌ನ ಕೆಲವು ಅಂಶಗಳನ್ನು ತಿಳಿಸಿದರು.

ಕೆಲವು ರಾಷ್ಟ್ರಗಳ ಜಿಡಿಪಿ ದರಗಳನ್ನು ಉಲ್ಲೇಖಿಸುತ್ತಾ ತಮ್ಮ ಮಾತನ್ನು ಆರಂಭಿಸಿದ ರೊ.ರಘುರಾಮ ಭಟ್ಟರು, ಬಜೆಟ್‌ನ ಕೆಲವು ಅಂಶಗಳು ಈ ರೀತಿ ಇವೆ ಎಂದು ಪ್ರಸ್ತಾಪಿಸಿದರು.

**Budget 2026 Highlights: Key Takeaways, Important Points**

The Union Budget 2026 Highlights primarily focused on agriculture, MSME development, skill development and emerging sectors like AI and robotic technologies. The Finance Minister presented the Union Budget 2026 on 01st February, Sunday.

**1. Direct Tax Changes**

**Key Income Tax changes in Budget 2026**

- Extension of due date to file revised return to 31st March, with a nominal fee up to Rs 5,000.
- Extension of due date to non-audit business taxpayers to 31st August, from 31st July.
- Sale of shares on buyback will be taxed under capital gains.
- Tax exclusion for Sovereign Gold Bonds redemption is now available only if the bonds are originally subscribed.
- TCS rate changes for specified goods, overseas education and medical remittances and overseas tour package program.

**i. Extension of Due Date for Non-Audit Taxpayers**

- For non-audit taxpayers except those who file ITR 1 and ITR 2, the due date for filing ITR is extended to 31st August. This extension is applicable from FY 2025-26 (AY 2026-27).
- Simply put, the due dates for ITR-3 and ITR-4 have been extended to 31st August.
- For the upcoming assessment year, the due date for such taxpayers is 31st August 2026.

**Extension of Revised Return Due Date**

- The due date for the revised ITR has been extended to 31st March from 31st December.
  However, if you file the revised return after 31st December, the following late fees are applicable

| **Income Level** | **Late Fee** |
|---|---|
| Up to Rs. 5 lakh | RS. 1000 |
| More than Rs. 5 lakh | RS. 5000 |

- These changes are applicable from 01st April 2026.

**ii. Taxation of Sovereign Gold Bonds**

- Sovereign Gold Bonds are not taxable if they are redeemed. Every SGB holder is eligible for redemption from 5th year.
- This budget has added an additional condition, that the bonds should be originally subscribed for availing this benefit of tax exclusion.
- SGBs that are purchased during the tenure are not eligible for this tax exclusion.
- Simply speaking, from the upcoming tax year, SGBs are exlcuded from capital gain taxes only if they are originally subscribed and held till redemption.
- However, interest on SGBs are still taxable.

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**

### iii. TCS Rate Changes

**The following table shows the present and proposed TCS rates.**

| Specified goods | Present Rate | Proposed rate |
|---|---|---|
| Alcoholic liquor for human consumption | 1% | 2% |
| Tendu Leaves | 1% | 2% |
| Scrap | 1% | 2% |
| Education and medical remittances above Rs 10 lakhs under LRS | 5% | 2% |
| Remittance for Overseas tour package program | 5% up to Rs 10 lakh, and 20% exceeding Rs 10 Lakhs | 2% for all remittances |

### iv. Form 15G and 15H Changes

- Lower Tax Deduction Certificates (Form 15G and 15H) under section 395 of the Income Tax Act 2025 can now be applied for electronically. Previously, certain states have enabled online applications for LTDC.
- Also, persons can submit their lower tax declarations to the depositories directly (e.g., CDSL, NSDL) for lower TDS deduction on interest, dividends, and income from mutual fund units.
- The declaration will be forwarded to all companies and entities that pay the investors.
- Previously, taxpayers were required to submit the certificate to every fund house and other payers. To avoid this cumbersome process amendment has been made to section 393(6) of the IncomeTax Act 2025.
- Supply of manpower is subject to TDS for works contracts, not as fees for providing technical services.

### v. Buyback Provisions

- Currently, all the sale proceeds from the sale of shares on buyback is treated as dividend income.
- As per the budget amendments, share sales on buyback is taxed under capital gains.
- For promoters, an additional buyback tax is levied. This will make the effective tax outgo for buyback transactions at 22% for corporate promoters and 30% for non-corporate promoters.

### vi. TDS Procedural Changes

- Presently, when an NRI sells immovable property, the buyer must apply for a TAN and deduct TDS under section 194IA for the transaction.
- As per the Budget 2026 changes, the buyer is no longer required to apply for a TAN; they can now obtain a PAN-based challan and fulfil the TDS requirements.

### Conclusion

The budget 2026 primarily focused on economic security, self reliance and indigenous development, with focus on simplification and better compliance.

ಈ ನಡುವೆ ರೊ.ಡಿ.ಎಸ್. ನಟರಾಜ್, ರೊ.ನಿರ್ಮಲಾ ಶಿವಾನಂದ ಮತ್ತು ರೊ.ಆರ್.ಆನಂದರವರ ಕೆಲವು ಪ್ರಶ್ನೆಗಳಿಗೆ ಉತ್ತರಿಸಿದರು. ಕೊನೆಯಲ್ಲಿ ಅಧ್ಯಕ್ಷರಾದ ರೊ.ಆರ್. ಆನಂದರವರು ಮಾತನಾಡಿ, ಇಂದು ಬಜೆಟ್‌ನ ಹಲವಾರು ಅಂಶಗಳನ್ನು ರೊ.ರಘುರಾಮ ಭಟ್ಟರು ಪ್ರಸ್ತಾಪಿಸಿ ಮನದಟ್ಟು ಮಾಡಿದ್ದಾರೆ ಎನ್ನುತ್ತಾ, ಅವರಿಗೆ ಕೃತಜ್ಞತೆ ತಿಳಿಸಿ ನೆನಪಿನ ಕಾಣಿಕೆ ನೀಡಿದರು. ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಅಂದಿನ ಉಪಹಾರ ವ್ಯವಸ್ಥೆ ಮಾಡಿದ್ದ ರೊ.ಎಂ.ಮಾಧವಾಚಾರ್‌ಗೂ ಸಹ ಕೃತಜ್ಞತೆ ತಿಳಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಸರ್ವರಿಗೂ ವಂದಿಸಿದರು.

## ಇಂಟರ್ಯಾಕ್ಟ್ ಮಕ್ಕಳಿಗೆ ಕಾರ್ಯಾಗಾರ

ದಿನಾಂಕ: 04–02–2026ರಂದು ಶಿವಮೊಗ್ಗದ ಭಾರತೀಯ ವಿದ್ಯಾಭವನ ಡಾ. ಕೃಷ್ಣಮೂರ್ತಿ ಮತ್ತು ಶ್ರೀಮತಿ ಶಕುಂತಲಮ್ಮ ಮೆಮೋರಿಯಲ್ ಸ್ಕೂಲ್‌ನಲ್ಲಿ **'ಮಕ್ಕಳಿಗೆ ಹದಿಹರೆಯದ ವಯಸ್ಸಿನಲ್ಲಿ ಆಗುವ ಸಮಸ್ಯೆಗಳು ಮತ್ತು ಪರಿಹಾರ'** – ಎಂಬ ವಿಷಯದ ಬಗ್ಗೆ ಕಾರ್ಯಾಗಾರವನ್ನು ರೋಟರಿ ಕ್ಲಬ್ ಶಿವಮೊಗ್ಗದ ವತಿಯಿಂದ ನಡೆಸಲಾಯಿತು. ಒಂಭತ್ತನೆಯ ತರಗತಿಯ ವಿದ್ಯಾರ್ಥಿನಿಯರ ವಿಭಾಗಕ್ಕೆ ಡಾ. ರಕ್ಷಾ ಯು. ರಾವ್‌ರವರು ಹಾಗೂ ವಿದ್ಯಾರ್ಥಿಗಳ ವಿಭಾಗಕ್ಕೆ ಡಾ. ಐಶ್ವರ್ಯರವರು ಪವರ್ ಪಾಯಿಂಟ್ ಪ್ರೆಸೆಂಟೇಶನ್ ಮೂಲಕ ವಿವರಿಸಿದರು.

ಕಾರ್ಯಕ್ರಮದಲ್ಲಿ ನಮ್ಮ ಕ್ಲಬ್‌ನ ರೊ. ಸುನೀತಾ ಶ್ರೀಧರ್, ರೊ. ಕಾಂಚನ್ ಕುಲಕರ್ಣಿ, ರೊ. ರಕ್ಷಾ ಯು. ರಾವ್, ರೊ. ಸುಮಲತ ಭೂಪಾಳಂ, ಡಾ. ಐಶ್ವರ್ಯ, ರೊ. ಎನ್. ಎಸ್. ಶ್ರೀಧರ್, ರೊ. ವಿಶ್ವಾಸ್ ಎಲಬುರ್ಗಿ, ರೊ. ಸೆಂಥಿಲ್ ವೇಲನ್‌ರವರು ಉಪಸ್ಥಿತರಿದ್ದರು.















## ಸಂಪಾದಕೀಯ

### ಕೋಪ ಕರಗಲಿ...

ಮನುಷ್ಯನ ಮನದಲ್ಲಿ ಮೂಡುವ ಹಲವು ಭಾವನೆಗಳಲ್ಲಿ ಕೋಪವೂ ಒಂದು. ಎಲ್ಲ ಸಂದರ್ಭಗಳಲ್ಲಿ ಕೋಪ ಅನರ್ಥಕಾರಿ, ಅನಗತ್ಯ ಎಂದೆಣಿಸಬೇಕಾಗಿಲ್ಲ. ಎಲ್ಲಿ ಕೋಪ ಬರಬೇಕೋ ಅಲ್ಲಿ ಬರದಿದ್ದರೆ ಅದೂ ಕೂಡ ಒಂದು ನ್ಯೂನತೆಯೇ ಆಗುತ್ತದೆ ಎಂದರೆ ಅತಿಶಯವಲ್ಲ. ಆದರೆ ಎಲ್ಲಿ, ಎಷ್ಟು, ಹೇಗೆ ಸಿಟ್ಟಾಗಬೇಕು ಎಂಬುದರ ಅರಿವು ಅತ್ಯಂತ ಅಗತ್ಯ. ಸಿಟ್ಟಾಗುವುದರಲ್ಲೂ ಜ್ಞಾನವಿರಬೇಕು.

ಕೋಪ ಅತಿಯಾದರೆ ಅದು ಹಾನಿಕಾರಕ. ಆ ಕಾರಣಕ್ಕಾಗಿಯೇ 'ಕೋಪವೆಂದರೆ ಏನು'? ಎಂದು ಜ್ಞಾನಿಯೊಬ್ಬನನ್ನು ಕೇಳಿದಾಗ, 'ಮತ್ತೊಬ್ಬರ ತಪ್ಪಿಗೆ ನಮಗೆ ನಾವು ಕೊಟ್ಟುಕೊಳ್ಳುವ ಶಿಕ್ಷೆಯೇ ಕೋಪ'. ಕೋಪಿಸಿಕೊಂಡಾಗ ನಮ್ಮ ಮನಸ್ಸಿನ ಆರೋಗ್ಯ ಹಾಗೂ ದೇಹದ ಆರೋಗ್ಯ ಎರಡರ ಮೇಲೂ ಪ್ರತಿಕೂಲ ಪರಿಣಾಮಗಳು ಬೀರುತ್ತದೆ. ಜೊತೆಗೆ ನಾವು ಯಾರ ಮೇಲೆ ಕೋಪಿಸಿಕೊಂಡಿರುತ್ತೇವೆಯೋ ಅವರೊಂದಿಗಿನ ಸಂಬಂಧವೂ ಹಾಳಾಗುತ್ತದೆ. ಹಾಗೆಂದು ಯಾವ ವಿಷಯಕ್ಕೂ ನಾನು ಸಿಟ್ಟಾಗುವುದಿಲ್ಲ ಎಂಬ ವ್ರತ ತೊಟ್ಟರೆ ನಮ್ಮ ಬೆಲೆಯನ್ನು ನಾವೇ ಕಳೆದುಕೊಳ್ಳಬೇಕಾಗುತ್ತದೆ. ಮತ್ತೊಬ್ಬರು ನಮ್ಮೊಂದಿಗೆ ಅನುಚಿತವಾಗಿ ನಡೆದುಕೊಂಡಾಗ, ನಮ್ಮ ಸ್ವಾಭಿಮಾನಕ್ಕೆ ಧಕ್ಕೆ ತಂದಾಗ, ನಾವು ಸಿಟ್ಟಾಗಲೇಬೇಕು. ನಮಗೆ ಅವಮಾನವಾದರೂ ನಾವು ಪ್ರತಿಭಟಿಸುತ್ತಿಲ್ಲವೆಂದಾದರೆ ನಾವು ಪದೇ ಪದೇ ಅವಮಾನಕ್ಕೆ ಗುರಿಯಾಗಬೇಕಾಗುತ್ತದೆ. ಆದರೆ ಕೆಲವೆಡೆಗಳಲ್ಲಿ ನಾವು ಸಿಟ್ಟಾದರೂ, ಆಗದಿದ್ದರೂ ಅಂತಹ ವ್ಯತ್ಯಾಸವೇನೂ ಆಗುವುದಿಲ್ಲ. ಉದಾ; ರಸ್ತೆಯಲ್ಲಿ ವಾಹನ ಚಲಾಯಿಸುವಾಗ ಮತ್ತೊಂದು ವಾಹನ ಸವಾರನು ರಸ್ತೆಯ ನಿಯಮಗಳನ್ನು ಉಲ್ಲಂಘಿಸಿ ವಾಹನ ಚಲಾಯಿಸುತ್ತಾ ಓವರ್ ಟೇಕ್ ಮಾಡಿದಾಗ, ಹಲವರು ಸಿಟ್ಟಾಗಿ ಆ ಮತ್ತೊಬ್ಬ ಸವಾರನನ್ನು ಬೈದುಕೊಳ್ಳಲು ಆರಂಭಿಸುತ್ತಾರೆ. ಆತನೂ ವಾಗ್ವಾದಕ್ಕಿಳಿದು ಅನಗತ್ಯವಾದ ಸಂಕೀರ್ಣ ಸನ್ನಿವೇಶ ಸೃಷ್ಟಿಯಾಗುತ್ತದೆ. ಜಗತ್ತನ್ನೆಲ್ಲ ತಿದ್ದುತ್ತೇನೆ ಎಂದು ನಾವು ಹೊರಡುವ ಅಗತ್ಯವಿಲ್ಲ. ನಾವು ಸರಿದಾರಿಯಲ್ಲಿ ನಡೆದು ಇತರರಿಂದ ನಮಗೆ ತೊಂದರೆ ಯಾಗದಿರುವಷ್ಟು ಎಚ್ಚರಿಕೆಯನ್ನು ವಹಿಸಿದರೆ ಸಾಕು.

ಕೆಲವರಿಗೆ ಆ ಕ್ಷಣದಲ್ಲಿ ಸಿಟ್ಟು ಬಂದರೂ ಬಹುಬೇಗ ಅದು ಮಾಯವಾಗಿಬಿಡುತ್ತದೆ. ಮತ್ತೆ ಕೆಲವರಿಗೆ ಸಿಟ್ಟು ಒಂದೆರಡು ದಿನಗಳ ಕಾಲ ತನ್ನ ತೀವ್ರತೆಯನ್ನು ಉಳಿಸಿಕೊಂಡಿರುತ್ತದೆ. ಕೆಲವರು ಮಾತ್ರ ತಮಗೆ ಬಂದ ಸಿಟ್ಟನ್ನು ಬಹುಕಾಲ ಜತನವಾಗಿ ಕಾಪಾಡಿಕೊಳ್ಳುತ್ತಾರೆ. ಇದು ತಮ್ಮ ಸ್ವಾಭಿಮಾನದ ಸಂಕೇತ ಎಂದು ಭಾವಿಸುತ್ತಾರೆ. ಮನುಷ್ಯರಿಂದ ತಪ್ಪುಗಳಾಗುವುದು ಸಹಜ. ನಾವೂ ಅದೆಷ್ಟೋ ಬಾರಿ ಅಂತಹ ತಪ್ಪುಗಳನ್ನು ಮಾಡಿದವರೇ ಆಗಿರುತ್ತೇವೆ. ಆದರೆ ನಮ್ಮನ್ನು ಕ್ಷಮಿಸಿಕೊಳ್ಳುವಷ್ಟು ಸುಲಭವಾಗಿ ಮತ್ತೊಬ್ಬರನ್ನು ಕ್ಷಮಿಸುವ ಔದಾರ್ಯ ನಮ್ಮಲ್ಲಿ ಇಲ್ಲವಾಗಿರುತ್ತದೆ. ಅಕ್ಷಮ್ಯ ಎನ್ನುವಂತಹ ತಪ್ಪುಗಳಾಗುವುದು ವಿರಳ. ಸೇಡುತೀರಿಸಿಕೊಳ್ಳುವವನಿಗಿಂತ ಕ್ಷಮಿಸಿ ಮುಂದೆ ಸಾಗುವವನು ವಿವೇಕಿ.

'ಉತ್ತಮನ ಕೋಪ ಕ್ಷಣಕಾಲ, ಮಧ್ಯಮನದ್ದು 2 ಗಂಟೆ, ಅಧಮನಿಗೆ 1 ದಿನದ ಕೋಪ. ನೀಚನಿಗೆ ಮಾತ್ರ ಸಾಯುವವರೆಗೂ ಕೋಪವೋ ಕೋಪ' ಎಂಬ ಮಾತಿದೆ. ನಮಗೆ ಬರುವ ಕೋಪವನ್ನು ಹೆಚ್ಚುಕಾಲ ಇರಲು ಬಿಡದೆ ಉತ್ತಮರ ಸಾಲಿಗೆ ಸೇರುವ ಪ್ರಯತ್ನ ನಾವೆಲ್ಲ ಮಾಡೋಣ. ತನ್ಮೂಲಕ ಎಲ್ಲರ ಪ್ರೀತಿ - ವಿಶ್ವಾಸವನ್ನು ಉಳಿಸಿಕೊಳ್ಳೋಣ.

• ರೊ. ಎಂ. ಮಾಧವಾಚಾರ್

## ಆಶಾಕಿರಣ 44ನೇ ವಾರ್ಷಿಕ ಸರ್ವಸದಸ್ಯರ ಸಭೆ

**ದಿನಾಂಕ: 15–02–2026ನೇ ಭಾನುವಾರ ಸಮಯ: ಬೆಳಿಗ್ಗೆ 11 ಕ್ಕೆ**

**ಸ್ಥಳ: ಆಶಾಕಿರಣ, ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ**

ವಿದ್ಯಾನಗರ, ಶಿವಮೊಗ್ಗದಲ್ಲಿ

**ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಯ 44ನೇ ಸರ್ವ ಸದಸ್ಯರ ಸಭೆಯನ್ನು**

ಅಧ್ಯಕ್ಷರಾದ **ಡಾ. ರಜನಿ ಪೈ**

ಇವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿದೆ. ತಾವುಗಳು ಸಮಯಕ್ಕೆ ಸರಿಯಾಗಿ ಹಾಜರಿದ್ದು, ತಮ್ಮ ಅಮೂಲ್ಯ ಸಲಹೆ, ಸೂಚನೆ ನೀಡಿ, ಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಲಾಗಿದೆ.



## Happy Birthday Wishes





Dr Narayan Panji
04th Feb




Vasanth U Sastry
06th Feb



Dr. Nirmala H. T.
11th Feb



Shobha
12th Feb.









### ಮುದ್ದುರಾಮನ ಚೌಪದಿ...

**ಬೇಕು ತಿನಲಿಕೆ ತಿನಿಸು, ಹಣ ವೆಚ್ಚ ಮಾಡಲಿಕೆ**
**ಅತಿಯಾದರದೆ ನಮಗೆ ನೂರು ತಲೆನೋವು**
**ಬರಿಬಿಸಿಲು, ಬರಿಸೋನೆ ಹಿತವಲ್ಲ ಜೀವಿತಕೆ**
**ಮಿತವಿದ್ದರದೆ ಅಂದ – ಮುದ್ದುರಾಮ**

To,

Book Post